

ಓಡುತ್ತಿದ್ದ ಇಲಿಗಳು ಹಣೆಯ ಬ್ಯಾಟರಿಗೆ ಕೆಲವು ಗಕ್ಕನೆ ನಿಂತರೆ, ಇನ್ನು ಕೆಲವು ಮೆದೆಯ ಒಳಗೆ ಜಾಗ ಮಾಡಿಕೊಂಡು ವಾಪಸು ಹತ್ತುತ್ತಿದ್ದವು. ಅದರಲ್ಲಿ ಒಂದೆರಡು ಇಲಿಗಳು ತಪ್ಪಿಸಿಕೊಂಡು ಓಡಲು ಪ್ರಯತ್ನಿಸುವಾಗ ಆ ಇಲಿಗಳಿಗೆ ಕರಿಯನ ಚಡ್ಡಿಯು ಬಿಲದಂತೆ ಕಂಡಿರಬೇಕು! ಕೊಳವೆಯಾಕಾರದ ಆ ಕತ್ತಲೆ ಇಲಿಗಳಿಗೆ ಯಾವುದೋ ಬಿಲವೆಂದು ಭಾವಿಸಿ ಪ್ರಾಣಭೀತಿಯಿಂದ ರಭಸವಾಗಿ ಚಡ್ಡಿಯ ಒಳನುಗ್ಗಿದವು. ನುಗ್ಗಿದ ರಭಸಕ್ಕೆ ಬಲೆ ಬಿಟ್ಟು ಕುಣಿದಾಡಿದ ಕರಿಯ ಒಳನುಗ್ಗಿದ ಇಲಿಯಿಂದ ಹೇಗೋ ತಪ್ಪಿಸಿಕೊಂಡ. ಅದ್ಯಾವ ಮಾಯದಲ್ಲಿ ಚಡ್ಡಿ ಒಳ ಹೊಕ್ಕ ಇಲಿಗಳು ಅವನು ಕುಣಿದ ರಭಸಕ್ಕೆ ರಿವರ್ಸ್ ತೆಗೆದುಕೊಂಡು ಪರಾರಿಯಾದವೋ? ಒಟ್ಟಿನಲ್ಲಿ ಏರುಮುಖದಲ್ಲಿ ಹತ್ತಿದ ಇಲಿಗಳು ಇಳಿಜಾರಿನಲ್ಲಿ ಜಾರಿಹೋದದ್ದು ಮಾತ್ರ ಸೋಜಿಗವಾಗಿತ್ತು. ಬಲೆ ಬಿಟ್ಟು ಸಡಿಲವಾಗುತ್ತಿದ್ದಂತೆ ಒಂದು ಕಡೆ ಬಂದ ಇಲಿಗಳೆಲ್ಲ ಬಲೆಯ ಸಂದಿಯಲ್ಲಿ ಓಡಿ ತನ್ನ ಪ್ರಾಣ ಉಳಿಸಿಕೊಂಡು ಪರಾರಿಯಾದವು.

ತುಂಬು ನಿರೀಕ್ಷೆಯಿಂದ ಬಂದ ಬೇಟೆ ಸಫಲವಾಗಲಿಲ್ಲವೆಂದು ನಿರಾಸೆಯಾದ ಮರಿಯ ಹಿಗ್ಗಾಮುಗ್ಗಾ ಬೈಯುತ್ತಾ ಇಲಿಯ ಜೊತೆಗೆ ಕರಿಯನನ್ನ ವಾಚಾಮಗೋಚರ ಬೈದನು. ಮಧ್ಯರಾತ್ರಿಯಾಗಿತ್ತು. ಗೂಬೆಗಳು ತಿರುಗಾಡುತ್ತಾ ಗುಟುರು ಹಾಕುತ್ತ ತನ್ನ ಬೇಟೆಗೆ ಹೊಂಚುಹಾಕುತ್ತಿದ್ದ ಸಮಯದಲ್ಲಿ ನರಪ್ರಾಣಿಗಳನ್ನು ದುರುಗುಟ್ಟಿ ನೋಡುತ್ತಿತ್ತು. ಜೊತೆಗೆ ತನ್ನ ದನಿಯಿಂದ ಅಸಹನೀಯವಾದ ವಾರೆನೋಟವೂ ಕೂಡ ಇತ್ತು. ನಿಶಾಚರಿಗಳೆಲ್ಲ ಕ್ರಿಯಾಶೀಲವಾಗಿದ್ದವು. ಒಂದು ಬಂಡೆ ಕಲ್ಲಿನ ಮೇಲೆ ಇಲಿಗಳನ್ನು ಸುರಿದು ಎಣಿಸಿ ಬಂದವರಿಗೆಲ್ಲ ಹಂಚಿಕೊಂಡು ಮನೆಗೆ ವಾಪಸಾದೆವು. ಬಂದ ಹುಡುಗರಿಗೆ ಮೋಸವಾಗದಂತೆ ಇಲಿಯ ಪಾಲು ಸಿಕ್ಕ ಖುಷಿಯಲ್ಲಿ ರಾತ್ರಿ ಅವರವರ ಮನೆಗೆ ತಲುಪಿ ಮೈ ಚೆಲ್ಲಿ ಮಲಗಿದರು. ಮರಿಯನ ಚೀಲದಲ್ಲಿ ಸುಮಾರು ಹತ್ತಿಪ್ಪತ್ತು ಇಲಿಗಳು ಇದ್ದವು. ಬೇಟೆಗೆ ಅವನೇ ನಾಯಕನಾದ್ದರಿಂದ ಪಾಲು ಹೆಚ್ಚಿತ್ತು. ಬೆಳಿಗ್ಗೆ ಎದ್ದ ಕೂಡಲೇ ಇಲಿಗಳನ್ನು ಬೆಂಕಿಯಲ್ಲಿ ಸುಟ್ಟು ಚರ್ಮ ತೆಗೆದು ಕಳ್ಳು ಕಿಲೀನ್ ಮಾಡಿ ಅಡುಗೆ ಮಾಡಲು ಅಣಿಯಾದ. ಚರ್ಮ ಬಿಡಿಸಿದ ಇಲಿಗಳೆಲ್ಲ ಬೆಂಕಿ ಕೆಂಡದಂತೆ ಕಂಗೊಳಿಸುತ್ತಿದ್ದವು. ಮಸಾಲೆ ಅರೆಯಲು ಒಂದು ಕಲ್ಲು ಇಟ್ಟುಕೊಂಡು ಅಡುಗೆ ಮಾಡಲು ಶುರು ಮಾಡಿದ. ಅವನು ಮಸಾಲೆ ಅರೆಯುವ ಘಮ ಇಡೀ ಕೇರಿಯ ತುಂಬೆಲ್ಲ ಗಮಗುಡುತಿತ್ತು. ಇಲಿ ಬೇಟೆಯಾಡಿದವರ ಮನೆಗಳಲ್ಲಿ ಬಾಡಿನ ಪರಿಮಳವು ಗಾಳಿಯಲ್ಲಿ ಅಲೆ ಅಲೆಯಾಗಿ ಇಡೀ ಊರಿಗೆ ವ್ಯಾಪಿಸುತ್ತಿತ್ತು. ಅಡುಗೆ ಸಿದ್ಧವಾಯಿತು. ಮರಿಯ ತನ್ನ ಎಂದಿನ ಹೆಂಡದ ಬಿಂದಿಗೆಯೊಂದಿಗೆ ಕೂತು ಬಿಸಿ ಮುದ್ದೆ ತಿನ್ನಲು ಪ್ರಾರಂಭಿಸಿದ. ಮುದ್ದೆಗೆ ಹೆಚ್ಚು ಹೊಂದಿಕೆಯಾದ ಸಾರು ಹಿತವಾಗಿತ್ತು. ಗೊಟುಕ್ ಎಂದು ನುಂಗುವುದು ದೇಖುವುದು, ಸರಾಗವಾಗಿ ನಡೆಯುತ್ತಿತ್ತು.

ಹೆಂಡದ ಮತ್ತು ಏರುತ್ತಿದ್ದಂತೆ ತನ್ನ ಜೀವದ ಸಂಗಾತಿ ಬಿಟ್ಟು ಹೋದ ಕಥೆಯನ್ನು ಹೇಳಲು ತೊಡಗಿದನು, 'ಒಂದು ಒಳ ಹೋದರೆ ಇನ್ನೊಂದು ಹೊರಬರುತ್ತದೆ'. ಅದನ್ನು ಕೇಳಿಸಿಕೊಂಡು ನೆರೆ ಹೊರೆಯವರು 'ಶುರುವಾಯ್ತು ವಾರ್ತೆಗಳು' ಎಂದು ಮೂದಲಿಸಿದರು. ಇಡೀ ಊರಿಗೆ ಕೇಳುವಂತೆ ತನ್ನ ಪೂರ್ವದ ಕತೆ ಬಿಚ್ಚುತ್ತಾ ಹೋದನು...

ಅಸಲಿಗೆ ತನ್ನ ಹೆಂಡತಿ ದೂರದ ಊರಿನವಳಲ್ಲ. ತನ್ನ ತಾತನ ಊರಾದ ಪಕ್ಕದ ಗಣೇಶ ಪುರದವಳು. ಬಾದರಾಯಣ ಸಂಬಂಧದಿಂದಾಗಿ ಮೊದಲೇ ಗೊತ್ತಿದ್ದ ಹುಡುಗಿಯನ್ನು ತಂದು ಮದುವೆ ಮಾಡಿಕೊಂಡಿದ್ದರು. ಮರಿಯನಿಗೂ ಯಾರೂ ಹಿಂದೆ ಮುಂದೆ ಇರಲಿಲ್ಲ. ತಾನು ಇರುವ ಊರಿನಲ್ಲಿಯೇ ಬಳುವಳಿಯಾಗಿ ಒಂದು ಎಕರೆ ಜಮೀನು ಬರೆದು ಮದುವೆ ಮಾಡಲಾಗಿತ್ತು. ಅದು ಬೀಳು ಹೊಲವಾಗಿತ್ತು. ಹೊಲದ ತುಂಬಾ ಇಲಿಗಳೇ ಕೊರೆದು ಬಿಲಗಳನ್ನು ಮಾಡಿ ಕಾಲಿಟ್ಟ ಕಡೆಯಲ್ಲೆಲ್ಲಾ ಇಳಿಯುತ್ತಿದ್ದವು. ಮರಿಯನಿಗೆ ಇದು ಎರಡನೇ ಮದುವೆಯಾಗಿತ್ತು. ಮೊದಲಿನವಳು ಸಂಕಷ್ಟಹರ ಗಣಪತಿಯ ಪರಮ ಭಕ್ತೆ. ತಿಂಗಳಿಗೊಮ್ಮೆ ಹಸಿದು ಉಪವಾಸ ಮಾಡಿ ಭಕ್ತಿ ಮೆರೆಯುತ್ತಿದ್ದವಳು ಏಕೋ ಏನೋ ಇಲಿ ಬೇಟೆಯಾಡುವುದು ಅವಳಿಗೆ ಇಷ್ಟವಿರಲಿಲ್ಲ. ಎಷ್ಟು ಹೇಳಿದರೂ ಕೇಳದ ಗಂಡನ ಜೊತೆಯಲ್ಲಿ ಇರುವುದು ಮತ್ತು ಗೆಲ್ಲುವುದು ಕಷ್ಟವೆಂದು ಒಂದು ದಿನ ಕಂಕುಳಲ್ಲಿ ಬಟ್ಟೆ ಇರುಕಿಕೊಂಡು ಊರಿಂದ ಜಾಗ ಖಾಲಿ ಮಾಡಿದಳು. ಎರಡನೇ ಹೆಂಡತಿಯಾಗಿ ಬಂದವಳು ಮನೆ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ಮಾಡಿಕೊಂಡೆ ಕಾಲ ನೂಕಿದಳು. ಪ್ರತಿ ದಿನ ಕೂಲಿ ಮಾಡಿಯೇ ಬದುಕುತ್ತಿದ್ದ ಎರಡನೆಯವಳಾದ ತಿಮ್ಮಿ ತನ್ನ ಗಂಡನನ್ನು ಪ್ರಾಣಕ್ಕಿಂತ ಹೆಚ್ಚಾಗಿ ಪ್ರೀತಿಸುತ್ತಿದ್ದಳು.

ಒಮ್ಮೆ ಸೊಪ್ಪು ಕೀಳಲು ಕೂಲಿಗೆ ಹೋದ ತಿಮ್ಮಿಯನ್ನು ಬಂದ ಹೆಂಗಸರೆಲ್ಲಾ ತುಂಬಾ ಜರಿದರು. 'ತಿಮ್ಮಿ ಅದೇನು ನಿನ್ ಗಂಡ ಯಾವಾಗಲೂ ಇಲಿ ಬೇಟೆ ಮಾಡಿ ಹುಲಿಯಂತೆ